ಯಾವುದರಲ್ಲೂ ಆಸಕ್ತಿ ತೋರಿಸದೆ ಏನು ಬೇಕೋ ಅಷ್ಟು ಮಾತ್ರ ಮಾಡಿ, ಎಷ್ಟು ಬೇಕೋ ಅಷ್ಟು ಮಾತ್ರ ಮಾತಾಡಿ, ಯಾವಾಗಲೂ ಒಂದು ದೃಢವಾದ ಮುಖಮಾಡಿಕೊಂಡು ಒಂದು ಎತ್ತಿನ ಹಾಗೆ ಭುಜ ಸೆಟೆಸಿ ನಡೆಯುವ ಸೊಸೆ ಸೌಭಾಗ್ಯ ನನಗೂ ಒಂದು ದೊಡ್ಡ ಸ್ತ್ರೀರತ್ನದಂತೆ ಕಾಣಿಸುತ್ತಿದ್ದಳು.

ಆಕೆಗಾದರೋ ನನ್ನ ಮೇಲೆ ಅಸಹನೆ.

ಇಂದ್ರಜಾಲದ ಮಾಯಾವಿಯ ಹಾಗೆ ವಿಲಾಸಿನಿಯನ್ನು ಬುಟ್ಟಿಯಿಂದ ಹೊರತೆಗೆದು ತನ್ನ ಮಾವ ಚಾರುದತ್ತರನ್ನು ಮರಳು ಮಾಡಲು ಬಿಟ್ಟಿರುವವನು ಇವನು ಎನ್ನುವುದು ಆಕೆಯ ಅನುಮಾನ.

ಆ ಅನುಮಾನ ಸುಳ್ಳಲ್ಲದಿದ್ದರೂ ಆಕೆ ಅಂದುಕೊಂಡಷ್ಟು ಗಂಭೀರವಾಗಿರಲಿಲ್ಲ.

'ತುಂಬ ಸರಳವಾಗಿ ಹೇಳುವುದಾದರೆ ಇಷ್ಟೇ ಮಾರಾಯಾ. ಚಾರುದತ್ತನಾದ ನನಗೆ ಈ ಸಾಯುವ ವಯಸಿನಲ್ಲೂ ನನ್ನ ಯೌವನವನ್ನು ಹರಿತ ಮಾಡಿಕೊಳ್ಳುವ ಉಮೇದು. ಅದಕ್ಕೆ ನನಗೆ ವಿಲಾಸಿನಿ ಬೇಕು. ಅವಳಿಗೆ ಯೌವನ ಇರುವಾಗಲೇ ಲೋಕೋತ್ತರವಾಗಿ ಪ್ರಸಿದ್ಧಿ ಬೇಕು. ಅದಕ್ಕೆ ಅವಳಿಗೆ ನಾನು ಮತ್ತು ನೀನು ಬೇಕು. ಇನ್ನು ನಿನಗಾದರೋ ಇಡೀ ಲೋಕವೇ ಒಂದು ದೊಡ್ಡ ಇಣುಕು ಕಾಮದ ಹಾಗೆ. ಎಲ್ಲದರಲ್ಲೂ ಇಣುಕಬೇಕು. ಅದಕ್ಕಿಂತ ದೊಡ್ಡ ಕುಂಬಳಕಾಯಿ ಏನೂ ಇಲ್ಲ. ಬರೆಯುವುದಾದರೆ ಇದನ್ನು ಬರಿ. ಚಾರುದತ್ತರು ತಮ್ಮ ಬದುಕಿನಿಂದ ಯಾವ ಸಂದೇಶವನ್ನು ಬಿಟ್ಟು ಹೋದರು ಎಂದು ಕೇಳಿದರೆ ಒಂದು ದೊಡ್ಡ ಪರಿಮಳಯುಕ್ತ ಅಪಾನವಾಯುವನ್ನ ಬಿಟ್ಟು ಹೋದರು, ಸ್ವಲ್ಪ ಹೊತ್ತಲ್ಲೇ ಅದೂ ಅಂತರಿಕ್ಷದಲ್ಲಿ ಅವರನ್ನು ಹುಡುಕುತ್ತಾ ಹೋಯಿತು. ಹಾಗಾಗಿ ಈ ಲೋಕದಿಂದ ಆ ದಿವ್ಯ ಪರಿಮಳವೂ ಮಾಯವಾಯಿತು ಅಂತ ಬರಿ' ಅಂದಿದ್ದರು.

'ಆ ವಿಲಾಸಿನಿ ಏನೇನೋ ಬರೆದು ಬೀದಿಯಲ್ಲೇ ನನ್ನ ಚಡ್ಡಿ ಬಿಚ್ಚುವುದು ಬೇಡ. ತಮಾಷೆಯಾಗಿ ಬರೆದರೂ ಪರವಾಗಿಲ್ಲ, ನೀನೇ ಬರಿ' ಅಂದಿದ್ದರು.

ಇದು ಅವರು ಹೇಳಿದ್ದು ಕನಸಿನಲ್ಲಿ ಅಲ್ಲ. ಫೋನಿನಲ್ಲಿ. ಏಕೆಂದರೆ, ಅವರು ಆಗ ಬದುಕಿದ್ದರು.

'ನಿನಗೆ ಗೊತ್ತಿಲ್ಲ, ಸೊಸೆ ಸೌಭಾಗ್ಯ ಕಡಿಮೆಯೇನೂ ಅಲ್ಲ. ನಾನು ಸತ್ತರೆ ಈ ಅಯೋಗ್ಯ ಮಾವನನ್ನು ಸುಡುವಾಗ ರಕ್ತಚಂದನ ಯಾಕೆ ಅಂತ ಅದನ್ನು ಬದಿಗೆ ಸರಿಸಿ ಸಾಧಾರಣ ಸಿಲ್ವರ್ ಮರದಲ್ಲಿ ನನ್ನನ್ನು ಸುಡಿಸಿದರೂ ಸುಡಿಸಿದಳೇ ಮಹಾರಾಣಿ' ಎಂದು ಸೊಸೆಯನ್ನೂ ಬೈದಿದ್ದರು.

ಅವರಿಗೆ ಆಳುಗಳ ಮೇಲೂ ಅನುಮಾನ, ಸೊಸೆಯ ಮೇಲೂ ಅನುಮಾನ.

ಇವನಿಗೂ ವಿಲಾಸಿನಿಗೂ ಇನ್ನೂ ಏನಾದರೂ ಉಳಿದಿದೆಯಾ ಅಂತ ನನ್ನ ಮೇಲೂ ಅನುಮಾನ. ತನ್ನ ಸೊಸೆಯ ಮೇಲೂ ಇವನು ಕಣ್ಣಿಟ್ಟಿದ್ದಾನಾ ಎಂಬ ಸಣ್ಣ ಸಂದೇಹ!

ಅದನ್ನು ನೋಡಿ ನನಗೆ ನಗು.

ವಿಲಾಸಿನಿ ಚಾರುದತ್ತರ 'ರಕ್ತಚಂದನ'ವನ್ನು ಅಪಹರಿಸಲು ಮಾಡಿದ ಪ್ರಯತ್ನದಲ್ಲಿ ನನ್ನ ಅಳಿಲು ಸೇವೆಯೇನೋ ಇತ್ತು. ಆದರೆ, ನನಗೆ ಗೊತ್ತಿಲ್ಲದೇ ಅವಳು ಅದನ್ನು ಅಪಹರಿಸುವಳು ಎಂಬ ಅಂದಾಜೇನೂ ಇರಲಿಲ್ಲ.

ಯಾಕೆಂದರೆ, ಅವರ ಅಟ್ಟದಲ್ಲಿ 'ರಕ್ತಚಂದನ'ದ ಹಸ್ತಪ್ರತಿ ಇರುವ ರಹಸ್ಯವನ್ನು ಅವಳಿಗೆ ಅರುಹಿದ್ದವನು ನಾನೇ. ಲೋಕದಲ್ಲಿ ಯಾರಿಗೂ ಗೊತ್ತಿಲ್ಲದ ಪರಮ ಸತ್ಯವೊಂದು ನನಗೆ ಮಾತ್ರ ಗೊತ್ತಿರುವುದು ಯಾಕೆ, ಅವಳಿಗೂ ಗೊತ್ತಾಗಲಿ ಅಂತ ಹೇಳಿಬಿಟ್ಟಿದ್ದೆ.

ಗೊತ್ತು ಗುರಿಯಿಲ್ಲದೆ ಓಡುವ ಜೀವನ ಕಥಾಚಕ್ರಗಳಿಗೆ ಅಲ್ಲಲ್ಲಿ ಒಂದೊಂದು ಒತ್ತು, ಒಂದೊಂದು ವೇಗ, ಒಂದೊಂದು ಒತ್ತಾಸೆ, ಸಣ್ಣಪುಟ್ಟ ತಿರುವುಗಳನ್ನು ಕೊಟ್ಟರೇನೇ ಅವುಗಳು ಕಥೆಯಾಗುವುದಲ್ಲವೇ. ಹಾಗೆ ಕೊಡದಿದ್ದರೆ ಕಥೆಗಾರನಾಗಿ ನಾನು ಬದುಕಿದ್ದು ಏನು ಪ್ರಯೋಜನ? ಹಾಗಾಗಿ ನಾನೂ ಒಂದು ಕಥಾಪಾತ್ರವಾಗಿ ವಿಲಾಸಿನಿಯ ಸಾಹಿತ್ಯಿಕ ಮಹತ್ವಾಕಾಂಕ್ಷೆಗಳಿಗೆ